**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರ:1060/2019**

**ಸಿ.ಡಬ್ಲ್ಯೂ: 2, ಪಿ.ಡಬ್ಲ್ಯೂ: 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಬ್ದುಲ್ ಖಾಧೀರ್ |
| ತಂದೆಯ ಹೆಸರು | : | ಬ್ಬುರಾನುದ್ದೀನ್ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಖಾಸಗಿ |
| ವಾಸ್ತವ್ಯ | : | ಸಿದ್ದೀಕ್‌ಸ್ಟ್ರೀಟ್ , ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾ: 13/03/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ಚಾಸ 4 ರವರು ನನ್ನ ದೊಡ್ಡಪ್ಪ ಆಗಿದ್ದಾರೆ. ಹನುಮಾನ ನಗರದಲ್ಲಿ ಇರುವ ಸರ್ವೆ ನಂಬರ್ 266 ರ ಆಸ್ತಿಯನ್ನು ಚಾಸಾ 4 ರವರು ಮಕ್ಕಳಿಗೆ ಕೊಟ್ಟಿದ್ದು ಇರುತ್ತದೆ. 2016 ರಲ್ಲಿ ಠಾಣೆಯಲ್ಲಿ ಸದರಿ ಪ್ರಕರಣದಲ್ಲಿ ಸಾಕ್ಷಿ ಹೇಳಿರುತ್ತೇನೆ. ಚಾಸಾ 15 ರವರು ನನಗೆ ಠಾಣೆಗೆ ಕರೆದಿದ್ದರು. ನನ್ನ ಸಮಕ್ಷಮ ಎಪ ಎಸ ಎಲ್ ವರದಿ, ಲೈಸನ್ಸ ಹಾಗೂ ಸಹಿಗಳನ್ನು ಗುರುತಿಸಲು ಹೇಳಿದ್ದು ನಾನು ಠಾಣೆಯಲ್ಲಿ ಮದ್ಯಾಹ್ನ 12.30 ಗಂಟೆಗೆ ಸಹಿ ಮಾಡಿರುತ್ತೇನೆ.

2. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಿರ್ಯಾದಿಯವರ ಮಾಧರಿ ಸಹಿ ಇರುವ 6 ದಾಖಲೆಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 3 ರಿಂದ 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 3 ಎ ರಿಂದ 8 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1,2,4,6,8 ಮತ್ತು 9 ನೇ ಆರೋಪಿ ಪರ ಶ್ರೀ ಕೆ ಹೆಚ ಎನ್ ವಕೀಲರಿಂದ,**

ಲೈಸನ್ಸ ಮತ್ತು ಸಹಿಗಳನ್ನು ಗುರುತಿಸಲು ನನಗೆ ಠಾಣೆಗೆ ಕರೆದಿದ್ದರು. ಇನ್ನೊಂದು ದಾಖಲೆ ಇತ್ತು ಅದು ಯಾವುದೆಂದು ನನಗೆ ಗೊತ್ತಿಲ್ಲ. ಠಾಣೆಯಲ್ಲಿ ನಾನು ಮತ್ತು ಚಾಸಾ 3 ರವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಇಂದು ನ್ಯಾಯಾಲಯದಲ್ಲಿ ನಾನು ಠಾಣೆಯಲ್ಲಿ ಗುರುತಿಸಿದ್ದ ದಾಖಲೆಗಳನ್ನು ತೋರಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ವಿಚಾರ ನನಗೆ ಗೊತ್ತಿದೆ . ನಾನು 3 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನನಗೆ ಕನ್ನ ಡ ಓದಲು ಬರುತ್ತದೆ. ಚಾಸಾ 4 ರವರು ನನ್ನ ದೊಡ್ಡಪ್ಪ ಎಂದು ನಾನು ಠಾಣೆಯಲ್ಲಿ ಹೇಳಿರುತ್ತೇನೆ. ಪಿರ್ಯಾದಿ ನನ್ನ

ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 7 ನೇ ಆರೋಪಿ ಪರ ವಕೀಲರು 1,2,4,6,8 ಮತ್ತು 9 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ1060/2019**

**ಸಿ.ಡಬ್ಲ್ಯೂಃ 10, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಸುಧೀರ್ ಬಿ ಗುನಗಾ

ಗಂಡನ ಹೆಸರು : ಬೀರಪ್ಪಾಗುನಗಾ

ವಯಸ್ಸು : 46 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ , ಸಂಚಾರ ಪೊಲೀಸ್ ಠಾಣೆ, ಕಾರವಾರ

ವಾಸ್ತವ್ಯ : ಹಬ್ಬುವಾಡಾ ರಸ್ತೆ, ಕಾರವಾರ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ13 /03/2026**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2014 ರಿಂದ 2021ರ ವರೆಗೆ ಪೊಲೀಸ್ ಆರಕ್ಷಕಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 29.03.2016 ರಂದು ಚಾಸಾ 15 ರವರು ಎಫ್ ಎಸ ಎಲ ಕಚೇರಿ ಬೆಂಗಳೂರಿಗೆ 1 ಎನವಲಪ ಕವರನ್ನು ತೆಗೆದುಕೊಂಡು ಹೋಗಿ ಎಪ ಎಸ ಎಲ ಕಚೆರಿಗೆ ನೀಡಿ ಸ್ವೀಕೃತಿ ತರಲು ಹೇಳಿದಂತೆ ಸದರಿ ಎನವಲಪ್ ಕವರನ್ನು ಸದರಿ ಕಚೇರಿಗೆ ನೀಡಿ ಸ್ವೀಕೃತಿ ಪತ್ರವನ್ನು ದಿಃ 31.03.2016 ರಂದು ಪಡೆದು ಮರಳಿ ಬಂದಿರುತ್ತೇನೆ.

3. ಸಾಕ್ಷಿಯು ಬೆಂಗಳೂರಿಗೆ ಹೋಗಿ ಸ್ಯಾಂಪಲ್ ನೀಡಿ ಬಂದು ಮೇಲಾಧಿಕಾರಿಗಳಿಗೆ ನೀಡಿದ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1,2,4,6,8 ಮತ್ತು 9 ನೇ ಆರೋಪಿ ಪರ ಶ್ರೀ ಕೆ ಹೆಚ ಎನ ವಕೀಲರಿಂದ,**

ನಾನು ಬೆಂಗಳೂರಿಗೆ ಕೆ ಎಸ ಆರ ಟಿ ಸಿ ಬಸ್ಸಿನಲ್ಲಿ ವಾರಂಟ್ ಮೂಲಕ ಹೋಗಿದ್ದು ಸದರಿ ವಾರಂಟಿನಲ್ಲಿ ಯಾವ ಸ್ಥಳಕ್ಕೆ ಯಾವ ದಿನಾಂಕಕ್ಕೆ ಹೋಗಿರುತ್ತೇನೆಂದು ನಮೂದು ಇರುತ್ತದೆ. ವಾರಂಟಿನಲ್ಲಿ ಟಿಕೇಟು ಇರುತ್ತದೆ. ವಾರಂಟು ಮತ್ತು ಟೀಕೇಟನ್ನು ತನಿಖಾಧಿಕಾರಿಗಳಿಗೆ ಒಪ್ಪಿಸಿರುತ್ತೇನೆ. ಅದನ್ನು ಇಂದು ನ್ಯಾಯಾಲಯದಲ್ಲಿ ನನಗೆ ತೋರಿಸಿಲ್ಲಾ. ನಾನು ನನ್ನ

ಹೇಳಿಕೆಯನ್ನು ನೀಡುವಾಗ ತನಿಖಾಧಿಕಾರಿಗೆ ವಾರಂಟಿನ ಬಗ್ಗೆ ಹೇಳಿರುತ್ತೇನೆ. ದಾಖಲೆಗಳು ಶೀಲ್ಡ ಕವರಿನಲ್ಲಿದ್ದವು. ದಾಖಲೆಗಳಲ್ಲಿ ಎಲ್ಲಿ , ಯಾವಾಗ ಶೀಲ್ಡ ಮಾಡಲಾಗಿದೆ ಎಂದು ಗೊತ್ತಿಲ್ಲ ಆದ್ದರಿಂದ ಶೀಲ್ಡ ಕವರಿನಲ್ಲಿ ಏನು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಶೀಲ್ಡ ಕವರನ್ನು ಇಂದು ನ್ಯಾಯಾಲಯದಲ್ಲಿ ತೋರಿಸಿಲ್ಲಾ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಬರೆದ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ನಾನು ದಿಃ 29.03.2016 ರಂದು ಬೆಂಗಳೂರಿಗೆ ಸದರಿ ಪ್ರಕರಣ ಬಾಬ್ತು ಹೋಗಿದ್ದೇ ಇಲ್ಲಾ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಆದೇಶದಂತೆ ನಿಪಿ 1 ದಾಖಲೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 7 ನೇ ಆರೋಪಿ ಪರ ವಕೀಲರು 1,2,4,6,8 ಮತ್ತು 9 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**